**<u>ಅಸಲು ದಾವಾ ಸಂಖ್ಯೆ -5/2023</u>** **ಡಿ.ಡಬ್ಲ್ಯೂ:-1**

ದಿನಾಂಕಃ **22.01.2026** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು :- ವಾದಿ ಪರ ವಕೀಲರಿಂದ :-</u>

ಸಾಕ್ಷಿಗೆ **2** ಛಾಯಾಚಿತ್ರಗಳನ್ನು ತೋರಿಸಿ ಸದರಿ ಛಾಯಾಚಿತ್ರದಲ್ಲಿ ಕಾಣುತ್ತಿರುವ ಮನೆ ಬೇರೆ ಬೇರೆ ಎಂದು ಸಾಕ್ಷಿ ಒಪ್ಪಿಕೊಂಡಿದರಿಂದ ಸದರಿ ಛಾಯಾಚಿತ್ರಗಳನ್ನು ನಿಪಿ-**11** ಮತ್ತು **12** ಎಂದು ಗುರುತಿಸಲಾಯಿತು. ನಿಪಿ-**11** ರ ಛಾಯಾಚಿತ್ರದಲ್ಲಿ ಕಾಣುತ್ತಿರುವ ಮನೆಯು ವಾದಿಯ ವಾರಸುದಾರರಾದ ಯಲ್ಲಮ್ಮನ ಮನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಮ್ಮ ಮನೆ ಎಂದು ನುಡಿಯುತ್ತಾರೆ. ನಿಪಿ-**12** ಛಾಯಾಚಿತ್ರದಲ್ಲಿ ಕಾಣಿಸುತ್ತಿರುವ ಕೆಂಪು ಗೋಡೆಯ ಮನೆಯು ನಿಮ್ಮಗೆ ಸೇರಿದ್ದು ಎಂದರೆ ಸಾಕ್ಷಿಯು ನನ್ನ ದೊಡ್ಡಪ್ಪರಾದ ಉರುಳಿ ಕರಿಯಪ್ಪರವರಿಗೆ ಸೇರಿದು ಎಂದು ನುಡಿಯುತ್ತಾರೆ. ನಿಪಿ-**11** ಮತ್ತು **12** ಛಾಯಾಚಿತ್ರಗಳ ಹಿಂಬದಿಯಲ್ಲಿ ಖಾಲಿ ಜಾಗ ಇದೆ ಎಂದರೆ ಸರಿ. ನಾನು ಹಾಜರುಪಡಿಸಿರುವ ಈ ಸ್ವತ್ತಿನಲ್ಲಿ ನನ್ನ ದೊಡ್ಡಪ್ಪರ ಮನೆ ಉತ್ತರ ದಿಕ್ಕಿನಲ್ಲಿ ಬರುತ್ತದೆ. ನಿಪಿ-**11** ಮತ್ತು **12** ಛಾಯಾಚಿತ್ರದಲ್ಲಿ ಇರುವ ಮನೆಗಳ ನಂಬರ್ ನನಗೆ ಗೊತ್ತಿಲ್ಲ. ನಿಡಿ-**3** ದಾಖಲೆಯಲ್ಲಿ ಆಸ್ತಿ ನಂ. **99/1** ರ ಆಸ್ತಿಯ ಉತ್ತರಕ್ಕೆ ಉರುಳಿ ಕರಿಯಪ್ಪರವರ ಮನೆ ಇದೆ ಎಂದು ನಮೂದಾಗಿದೆ ಎಂದರೆ ಸರಿ. ನಿಡಿ-**2** ರ ದಾಖಲೆಯಲ್ಲಿ ಇರುವ ಆಸ್ತಿ ನಂ. **3** ರ ಆಸ್ತಿ ನನ್ನ ತಾಯಿಯಾದ ಕರಿಯಮ್ಮನ ಹೆಸರಿನಲ್ಲಿ ಇರುತ್ತದೆ. ನಿಡಿ-**2** ರ ಇರುವ ಆಸ್ತಿಗೆ ಈ ಸ್ವತ್ತು ಆಗಿರುತ್ತದೆ. ಸದರಿ ಈ ಸ್ವತ್ತನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಸಾಮಾನ್ಯವಾಗಿ **1** ವರ್ಷಗಳ ಕಾಲ ಒಂದು ಮನೆಯಲ್ಲಿ ವಾಸಮಾಡದೇ ಮತ್ತು ಸ್ವಚ್ಛತೆ ಮಾಡದಿದ್ದಾರೆ ಮನೆ ಹಾಳಾಗುತ್ತದೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ವಾದಿಯವರು ಊರಿನ ಹಬ್ಬದ ಸಮಯದಲ್ಲಿ ಬಂದು ವಾಸವಾಗಿರುತ್ತಿದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಹಬ್ಬದ ದಿನಗಳನ್ನು ಹೊರತುಪಡಿಸಿ ಬೇರೆ ದಿನಗಳಲ್ಲಿ ವಾದಿಯು ಚಿರದೋಣಿ ಗ್ರಾಮದಲ್ಲಿ ವಾಸವಾಗಿರುತ್ತಿದ್ದರು ಆ ಸಮಯದಲ್ಲಿ ದಾವಾ ಆಸ್ತಿಯಲ್ಲಿ ಇರುವ ಮನೆಯು

ಹಾಳಾಗುತ್ತದೆ ಎಂಬ ಉದ್ದೇಶದಿಂದ ನನಗೆ ವಾಸ ಮಾಡಲು ಅವಕಾಶ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ನಮ್ಮ ಆಸ್ತಿಯ ಉತ್ತರ ದಿಕ್ಕಿಗೆ ಇರುವ ನನ್ನ ದೊಡ್ಡಪ್ಪರಾದ ಉರುಳಿ ಕರಿಯಪ್ಪರವರಿಗೆ ಆಸ್ತಿ ಹೇಗೆ ಬಂತು ಎಂದರೆ ಸಾಕ್ಷಿಯು ಅವರಿಗೆ ಪಿತ್ರಾರ್ಜಿತವಾಗಿ ಬಂದಿರುತ್ತದೆ ಎಂದು ನುಡಿಯುತ್ತಾರೆ. ನಮಗೆ ಸೇರಿದ ಆಸ್ತಿಯ ಉತ್ತರ ದಿಕ್ಕಿಗೆ ನಮ್ಮ ದೊಡ್ಡಪ್ಪರವರಾದ ಉರುಳಿ ಕರಿಯಪ್ಪರವರಿಗೆ  ಸೇರಿದ ಆಸ್ತಿ ಪಿತ್ರಾರ್ಜಿತವಾಗಿ ಬಂದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಆದರೆ ಹಾಜರುಪಡಿಸಲು ತೊಂದರೆ ಇಲ್ಲ ಎಂದು ನುಡಿಯುತ್ತಾರೆ. ಖಾತೆ ನಂ.**50** ರ ಆಸ್ತಿಯನ್ನು ನಮ್ಮ ಅಜ್ಜ ಖರೀದಿ ಮಾಡಿದ ದಿನದಂದೆ ಯಲ್ಲಮ್ಮರವರು ದಾವಾ ಆಸ್ತಿಯನ್ನು ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿಯ ನಮ್ಮ ಅಜ್ಜ ಖರೀದಿ ಮಾಡಿರುವುದು ಗೊತ್ತು ಆದರೆ ಯಲ್ಲಮ್ಮರವರು ಖೀರಿದಿ ಮಾಡಿರು ವ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಮ್ಮ ಅಜ್ಜ ಮತ್ತು ಯಲ್ಲಮ್ಮರವರು ಒಬ್ಬ ವ್ಯಕ್ತಿಯಿಂದ ಆಸ್ತಿಯನ್ನು ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿಯು ನಮ್ಮ ಅಜ್ಜ ಖರೀದಿ ಮಾಡಿರುವುದು ಗೊತ್ತು ಆದರೆ ಯಲ್ಲಮ್ಮ ರವರು ಖರೀದಿ ಮಾಡಿರುವ ವಿಚಾರ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಮ್ಮ ಅಜ್ಜ ಖರೀದಿ ಮಾಡಿದ ಕ್ರಯ ಪತ್ರದ ಆಸ್ತಿಯಲ್ಲಿ ಉತ್ತರ ದಿಕ್ಕಿಗೆ ಚೆಕ್ಕು ಬಂಧಿಯಲ್ಲಿ ಯಲ್ಲಮ್ಮರವರು ಖರೀದಿ ಮಾಡಿದ್ದಾರೆ ಎಂದು ನಮೂದಾಗಿದೆ ಎಂದರೆ ಸಾಕ್ಷಿಯು ನಾನು ಸರಿಯಾಗಿ ಗಮನಿಸಿಲ್ಲ ಎಂದು ನುಡಿಯುತ್ತಾರೆ. ಯಲ್ಲಮ್ಮರವರು ದಾವಾ ಆಸ್ತಿಯನ್ನು ಖರೀದಿ ಮಾಡಿದ ನಂತರ ಪಂಚಾಯಿತಿಯಲ್ಲಿ ಖಾತೆ ಮಾಡಿಸಿಲ್ಲ ಎಂಬ ಒಂದೇ ಉದ್ದೇಶಕ್ಕಾಗಿ ದಾವಾ ಆಸ್ತಿಯು ನಮಗೆ ಸೇರಿದ್ದು ಎಂದು ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ:- ಇಲ್ಲ

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.